ಶ್ರೀ ಎನ್. ಹುಚ್ಚಮಾಸ್ತಿಗೌಡ—ಈ ಖಾಸಗಿ ಮೊಟ್ಟೆ ಒದಗಿಸತಕ್ಕವರ ಮೇಲೆ ಏನೂ ನಿಯಂತ್ರಣ ಹಾಕಿದರೂ ಅಲ್ಲಿ ನಡೆಯುತಕ್ಕಂಥ ದೋಷಗಳನ್ನು ತಪ್ಪಿಸುವುದು ಬಹಳ ಕಷ್ಟವಾಗಿದೇ ಆದಕ್ಕಾಗಿ ಸರ್ಕಾರದವರು ತಮ್ಮ ಬೀಜ ಕ್ಷೇತ್ರದಲ್ಲಿ ಹೆಚ್ಚು ವ್ಯವಸ್ಥೆ ಮಾಡಿ ಸರ್ಕಾರದ ಮೂಲಕವೆ, ಬೀಜಗಳನ್ನು ಒದಗಿಸುವುದು ಸೂಕ್ತವಲ್ಲವೇ ಎಂಬುದನ್ನು ಆದಷ್ಟು ಜಾಗ್ರತೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ಎಸ್. ಆತ್ಮಾನಂದ.—ಅದನ್ನು ಹಂತಹಂತವಾಗಿ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಸ್ವಲ್ಪಸ್ವಲ್ಪವಾಗಿ ಮಾಡತಕ್ಕ ಕೆಲಸ ಅಲ್ಲ. ಏಕೆಂದರೆ. ರೇಷ್ಮೆ ವ್ಯವಸಾಯಗಾರರಿಗೆ ಒಂದು ಸಾರಿ ದೋಷದ ಮೊಟ್ಟೆ ಸಿಕ್ಕಿದರೆ ಆ ವರ್ಷದ ಲಾಭವಲ್ಲ ಅಸಲು ಕೂಡ ಸಿಕ್ಕುವುದಿಲ್ಲ. ಶ್ರಮ ಪಟ್ಟದ್ದಕ್ಕೂ ಪ್ರಯೋಜನ ಇರುವುದಿಲ್ಲ. ಈ ತೊಂದರೆ ಇರುವುದರಿಂದ ಆದಷ್ಟು ಬೇಗ ಸರ್ಕಾರಿ ಕ್ಷೇತ್ರದಿಂದಲೇ ಬೀಜ ಒದಗಿಸತಕ್ಕ ವ್ಯವಸ್ಥೆ ಮಾಡುತ್ತೀರಾ ? ಇದಕ್ಕಾಗಿ ಸ್ವಲ್ಪ ಹಣ ಖರ್ಚು ಮಾಡಿದರೆ ಸಾಕು: ರೈತರಿಗೆ ಕೊಡತಕ್ಕ ಪ್ರೋತ್ಸಹ ಮುಖ್ಯವೇ ಹೊರತು ಬೇರೆ ಅಲ್ಲ ಇದಕ್ಕಾಗಿ ಹೆಚ್ಚು ಹಣ ಖರ್ಚು ಮಾಡತಕ್ಕ ಅಗತ್ಯವೂ ಇಲ್ಲ. ಆದ್ದರಿಂದ ಇದನ್ನು ಪೂರ್ಣವಾಗಿ ಪರಿಶೀಲಿಸಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ.—ಈಗ ಮೊಟ್ಟೆಗಳ ಅವಶ್ಯಕತೆಯಲ್ಲಿ ನಾವು ಸುಮಾರು ೪೫ ಪರ್ಸೆಂಟ್ ಅನ್ನು ಸರ್ಕಾರದ ವತಿಯಿಂದ ಪೂರೈಸುತ್ತಿದ್ದೇವೆ. ಉಳಿದ ೫೫ ಪರ್ಸೆಂಟ್ ಮೊಟ್ಟೆಯನ್ನು ಒದಗಿಸತಕ್ಕ ಜವಾಬ್ದಾರಿ ಸೆಂಟ್ರಲ್ ಸಿಲ್ಕ್ ಬೋರ್ಡ್ ಮತ್ತು ಖಾಸಗಿ ಮೊಟ್ಟೆ ತಯಾರಕರ ಮೇಲೆ ಬಿದ್ದಿದೆ. ಮಾನ್ಯ ಹುಚ್ಚಮಾಸ್ತಿಗೌಡರು ಹೇಳಿದ ಹಾಗೆ ೫೫ ಪರ್ಸೆಂಟ್ ಮೊಟ್ಟೆಗಳನ್ನು ಉತ್ಪಾದಿಸುವ ಜವಾಬ್ದಾರಿ ನಮ್ಮ ಮೇಲೆ ಬರುತ್ತದೆ. ಅದನ್ನು ನಿರ್ವಹಿಸುವುದು ಕಷ್ಟ. ಆದರೂ ಕೂಡ ರಾಜ್ಯದ ರೈತರ ಹಿತದೃಷ್ಟಿಯಿಂದ ಮೊಟ್ಟೆ ಅಭಾವ ನೀಗಿಸಲು ಶೀಘ್ರವಾಗಿ ಕಾರ್ಯಕ್ರಮ ಹಾಕಿ ಕೊಳ್ಳುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬೀಜ ಕ್ಷೇತ್ರ ಇಡೀ ರಾಜ್ಯದಲ್ಲಿ ವ್ಯಾಪಕವಾಗಿಲ್ಲ. ಕೇವಲ ೨-೩ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಇದೆ. ಆ ಕ್ಷೇತ್ರದಲ್ಲಿ ರೈತರಿಗೆ ಸಲವತ್ತು ಹೆಚ್ಚಿಗೆ ಕೊಟ್ಟರೆ ಅಲ್ಲಿ ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಿದೆ ಆದುದರಿಂದ ಅವರಿಗೆ ಬೇಕಾದ ನೀರು ಒದಗಿಸಿಕೊಡುವುದು ಗೊಬ್ಬರ ಒದಗಿಸುವುದು, ಚಂದ್ರಿಕೆ ಬಗೈರೆ ಸಾಮಾನುಗಳನ್ನು ಒದಗಿಸುವುದು—ಈ ಕಾರ್ಯಕ್ರಮ ತೆಗೆದ. ಕೊಂಡರೆ ಈ ತೊಂದರೆಯನ್ನು ಬೇಗ ನಿವಾರಣೆ ಮಾಡಬಹುದು. ಈ ದಿಸೆಯಲ್ಲಿ ಕಾರ್ಯಕ್ರಮ ಬೇಗ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೆ ?

ಶ್ರೀ ಎಂ. ಎಸ್. ಆತ್ಮಾನಂದ.—ಆ ಸಲಹೆಯನ್ನು ನಾನು ಪರಿಶೀಲಿಸಿ ಕಾರ್ಯಗತ ಮಾಡುತ್ತೇನೆ. ಮಾನ್ಯ ತಾನೆ ಮಾನ್ಯ ಬೈರೇಗೌಡರ ಗಮನ ಸೆಳೆಯುವ ಸೂಚನೆಯಲ್ಲಿ ಈ ವಿಷಯ ಪ್ರಸ್ತಾಪವಾಗಿತ್ತು. ಇವರು ಹೇಳತಕ್ಕ ಸಲಹೆಗಳನ್ನು ನಾನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತೇನೆ.

## ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿಯ ಅಭಾವದ ಬಗ್ಗೆ

೫೫೯. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲ್).—ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಅಭಾವವನ್ನು ನೀಗಿಸಲು ಕೋಲಾರ ನಗರದ ಬಳಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಡೀಸಲ್ ಜನರೇಟರೊಂದನ್ನು ಸ್ಥಾಪನೆ ಮಾಡಲು ಸರ್ಕಾರದವರ ಮುಂದೆ ಇದ್ದ ಯೋಜನೆಯನ್ನು ಇನ್ನು ಕಾರ್ಯಗತ ಮಾಡದಿರಲು ಕಾರಣವೇನು ?

ಆ) ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಅಭಾವವನ್ನು ನೀಗಿಸಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು).—

ಅ) ೧೯೬೭ರ ಅವಧಿಯಲ್ಲಿ ಕೋಲಾರ, ಬೀದರ್, ಜಮಖಂಡಿ ಮತ್ತು ಇಂಡಿ ಸ್ಥಳಗಳಲ್ಲಿ ಡಿ.ಜಿ. ಸೆಟ್‌ಗಳನ್ನು ಸ್ಥಾಪಿಸಲು ಯೋಜನಾ ಆಯೋಗವು ಒಪ್ಪಿಗೆ ನೀಡಿತು. ಅದರಂತೆ ಕೆ.ಪಿ.ಸಿ.ಯು ಟೆಂಡರ್‌ಗಳನ್ನು ಕರೆಯಿತು. ಟೆಂಡರ್‌ಗಳ ಪರಿಶೀಲನೆಯ ನಂತರ ಅವುಗಳ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಕೆ.ಪಿ.ಸಿ.ಯು ಕಳುಹಿಸಿ ಮತ್ತು ಈ ಸಂಬಂಧದಲ್ಲಿ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳಲು ಸಪ್ಲೈಯರ್ ಕ್ರೆಡಿಟ್ ಅಥವಾ ಡೆಫರ್ಡ್ ಪೇಮೆಂಟ್ ಸೌಲಭ್ಯವನ್ನು

ನೀಡಬೇಕೆಂದು ಕೋರಲಾಯಿತು. ಆದರೆ ಕೇಂದ್ರ ಸರ್ಕಾರವು ಈ ಪ್ರಸ್ತಾವನೆಯನ್ನು ಒಪ್ಪಲಿಲ್ಲ. ಆದ್ದರಿಂದ ಕರ್ನಾಟಕ ವಿದ್ಯುತ್ ನಿಗಮವು ಈ ಯೋಜನೆಯನ್ನು ಇಲ್ಲಿಯವರೆಗೆ ಕಾರ್ಯಗತ ಮಾಡಲಾಗಲಿಲ್ಲ. ಈ ವಿಷಯವನ್ನು ಕೇಂದ್ರ ಸರ್ಕಾರದೊಡನೆ ವ್ಯವಹರಿಸಲಾಗುತ್ತಿದೆ.

ಆ) ಕೋಲಾರ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜನ್ನು ಉತ್ತಮಪಡಿಸಲು ೧೯೯೫–೯೦ನೇ ಸಾಲಿನಲ್ಲಿ ಈ ಕೆಳಕಂಡ ಕೆಲಸಗಳನ್ನು ಕಾರ್ಯಗತ ಮಾಡಲಾಗಿದೆ.

೧ ಕೋಲಾರದಲ್ಲಿ ಒಂದು ೨೨೦ ಕೆ.ವಿ. ಸಬ್‌ಸ್ಟೇಷನ್ನಿನ ನಿರ್ಮಾಣ

೨ ಮಾಸ್ತಿಯಲ್ಲಿ ೬೬ ಕೆ.ವಿ. ಸಬ್‌ಸ್ಟೇಷನ್ ನಿರ್ಮಾಣ

೩ ಇರ್ಗಂಪಲ್ಲಿಯಲ್ಲಿ ೬.೩ ಎಂ.ವಿ.ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ಸ್ಥಾಪನೆ.

೧೯೯೦–೯೧ನೇ ಸಾಲಿನಲ್ಲಿ ಈ ಕೆಳಕಂಡ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ :

೧ ಬಂಗಾರಪೇಟೆಯಲ್ಲಿ ೬೬ ಕೆ.ವಿ. ಸಬ್‌ಸ್ಟೇಷನ್ ನಿರ್ಮಾಣ (ಕೆಲಸವು ಈಗಾಗಲೇ ಪ್ರಗತಿಯಲ್ಲಿದೆ)

೨ ೩೦ ಎಂ.ವಿ.ಎ.ಆರ್. ಸಾಮರ್ಥ್ಯದ ಕೆಪಾಸಿಟರ್ ಬ್ಯಾಂಕನ್ನು ಗೌರೀಬಿದನೂರಿನ ಸಬ್‌ಸ್ಟೇಷನ್ನಿನಲ್ಲಿ ಸ್ಥಾಪಿಸುವುದು.

ಶ್ರೀ ಎಂ. ವಿ ವೆಂಕಟಪ್ಪ.—ಅಧ್ಯಕ್ಷರೇ, ಕೋಲಾರ ನಗರದ ಬಳಿ ಡೀಸಲ್ ಜನರೇಟರ್ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇವೆ. ಅವರು ಒಪ್ಪಲಿಲ್ಲ ಎಂದು ಹೇಳಿದ್ದೀರಿ. ಅವರು ಒಪ್ಪದೆ ಇರುವುದಕ್ಕೆ ಕಾರಣವೇನು ಎಂಬುದನ್ನು ಸರ್ಕಾರ ತಿಳಿಸಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ನಾನು ಉತ್ತರದಲ್ಲಿ ಕೊಟ್ಟಿರುವಾಗೆ ನಾವು ಏನು ಕೇಳುತ್ತಿದ್ದೇವೆಂದರೆ ನಮಗೆ ಹಣ ಇಲ್ಲವಾದ್ದರಿಂದ ಕ್ರೆಡಿಟ್ ಕೊಡಿ ಅಥವಾ ಡೆಫರ್ಡ್ ಪೇಮೆಂಟ್ ಮಾಡಿ ಕೊಡಿ ಎಂದು ಕೇಳುತ್ತಿದ್ದೇವೆ. ಅದನ್ನು ಅವರು ಒಪ್ಪುತ್ತಾ ಇಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಮತ್ತೆ ಕೇಂದ್ರದ ಜೊತೆ ವ್ಯವಹರಿಸಲಾಗುತ್ತಿದೆ ಎಂದು ಹೇಳಿದ್ದೀರಿ ಈ ಬಗ್ಗೆ ವ್ಯವಹಾರ ಮಾಡಿ ಏನಾದರೂ ಇದಕ್ಕೆ ಕೊನೆ ತೋರಿಸುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಇದಕ್ಕೆಲ್ಲಾ ಕೇಂದ್ರದ ಒಪ್ಪಿಗೆ ಇಲ್ಲದೇ, ಅವರು ಹಣಕಾಸಿನ ವ್ಯವಸ್ಥೆ ಸರಿಯಾಗಿ ಮಾಡಿಲ್ಲ ಎಂದೆ ನಾವು ಡೈರೆಕ್ಟಾಗಿ ಮಾಡುವುದಕ್ಕೆ ಬರುವುದಿಲ್ಲ. ಈ ಬಗ್ಗೆ ಸರ್ಕಾರ ಒಂದಲ್ಲ ಹತ್ತು ಕಾಗದ ಬರೆದಿದೆ. ಏನಾದರೂ ಇನ್ನೊಂದು ರೀತಿಯಲ್ಲಿ ನಮಗೆ ಸಹಾಯ ಕೊಡುವುದಾದರೆ ಅದನ್ನು ಮಾಡಿಕೊಡಿ ಎಂದು ನಾವು ಪತ್ರವನ್ನು ಬರೆದಿದ್ದೆವು. ಎರಡು ಮೂರು ತಿಂಗಳ ಹಿಂದೆ ನಮ್ಮ ಪತ್ರಕ್ಕೆ ಅವರಿಂದ ಉತ್ತರ ಬಂದಿದೆ. ಯಾವುದೇ ಬೈಲ್ಯಾಟರಲ್ ನೆಗೋಶಿಯೇಷನ್ಸ್ ಮಾಡಬೇಕಾದರೆ ಅದು ಕೇಂದ್ರದಿಂದಲೇ ಆಗಬೇಕಾಗುತ್ತದೆ. ಈ ಬೈಲ್ಯಾಟರಲ್ ನೆಗೋಶಿಯೇಷನ್ಸ್‌ಗೆ ದೇಶಗಳ ಹೆಸರು ಹೇಳಿ ಎಂದು ಅವರು ಕೇಳಿದ್ದಾರೆ, ಅದಕ್ಕೆ ನಾವು ಉತ್ತರ ಕೊಟ್ಟಿದ್ದೇವೆ ಜಪಾನ್, ವೆಸ್ಟ್ ಜರ್ಮನಿ, ಫಿನ್‌ಲ್ಯಾಂಡ್, ಫ್ರಾನ್ಸ್. ನೆದರ್‌ಲ್ಯಾಂಡ್ ದೇಶಗಳ ಜೊತೆ ಬೈಲಾಟರಲ್ ನೆಗೋಶಿಯೇಷನ್ ಮಾಡಬಹುದೆಂದು ಉತ್ತರ ಕೊಟ್ಟಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಯಾವ ಜವಾಬು ಬರುತ್ತದೆ ಅದರ ಮೇಲೆ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ.—ಕೋಲಾರ, ಬೀದರ್, ಜಮಖಂಡಿಗಳಲ್ಲಿ ಡೀಸಲ್ ಜನರೇಟರ್ಸ್ ಏನು ಪ್ರಾರಂಭ ಮಾಡಬೇಕೆಂದಿದ್ದೀರಿ ಅದರ ಕಾಸ್ಟ್ ಎಷ್ಟು ಆಗುತ್ತದೆ ಹಾಗೂ ಎಷ್ಟು ಪವರ್ ಉತ್ಪಾದನೆಯಾಗುತ್ತದೆಂದು ಹೇಳಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಸುಮಾರು ೫೦ ಕೋಟಿ, ೬೦ ಲಕ್ಷ ರೂಪಾಯಿ ಆಗಬಹುದಿದ್ದು, ೪೦ ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ.—ಈ ಬಗ್ಗೆ ತಾವು ಪತ್ರ ಮುಖಾಂತರ ವ್ಯವಹಾರ ನಡೆಸುವ ಬದಲು ತಾವೇ ಒಂದು ಸಾರಿ ಪರ್ಸನಲ್ಲಾಗಿ ಈ ಬಗ್ಗೆ ಹೋಗಿಬರಬೇಕು. ಏಕೆಂದರೆ, ತಾವು ಕೋಲಾರ ಜಿಲ್ಲೆಯನ್ನು ಬಹಳ ನೆಗ್ಲೆಕ್ಟ್ ಮಾಡುತ್ತಿದ್ದೀರಿ. ಹೈದರಾಬಾದ್–ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಮಾಡಿ ಅದಕ್ಕೆ ೪೦ ಕೋಟಿ ರೂಪಾಯಿ ಕೊಡುತ್ತೀರಿ. ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಮಾಡುತ್ತೀರಿ. ಆದರೆ ನಮ್ಮ ಕೋಲಾರಕ್ಕೆ ಯಾವುದೇ ಯೋಜನೆಗಳು ಇಲ್ಲ. ಇವತ್ತು ನಮ್ಮಿಂದ ೩ ಲಕ್ಷ ಲೀಟರ್ ಹಾಲು ನಿವಂಗೆ ಬರುತ್ತಿದೆ. ಒಂದು ದಿವಸ ನಾವು ಈ ೩ ಲಕ್ಷ ಲೀಟರ್ ಹಾಲನ್ನು ನಿಲ್ಲಿಸಿ ಬಿಟ್ಟರೆ ನಿಮಗೆ ಕಾಫಿ ಇಲ್ಲದೇ ಹೋದರೆ ಆಗ ನಿಮಗೆ ಅರ್ಥವಾಗುತ್ತದೆ ಎಂದು ಕಾಣುತ್ತದೆ.

ಶ್ರೀ ಎಸ್. ಎಂ. ಯಾಹ್ಯಾ.—ಕೋಲಾರ ಜಿಲ್ಲೆಗೆ ಯಾವ ನೆರವು ಕೊಡಬೇಕೋ ಅದನ್ನು ಬೇರೆ ಜಿಲ್ಲೆಗಳಿಗಿಂತಾ ಹೆಚ್ಚು ಪ್ರಮಾಣದಲ್ಲೇ ಕೊಡಲಾಗಿದೆ. ನಮ್ಮ ಅಂಕಿಅಂಶ ನೋಡುವುದಾದರೆ, ಇದುವರೆಗೆ ಕೋಲಾರದಲ್ಲಿ ೫೨,೬೦೦ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ. ಅಲ್ಲಿಗೆ ೨೨೦ ಕೆ.ವಿ. ಲೈನ್ ಹಾಕಿದ್ದೇವೆ. ಅಲ್ಲಿ ಸಬ್‌ಸ್ಟೇಷನ್ಸ್ ಕೂಡ ಮಾಡಿದ್ದೇವೆ. ಈ ವರ್ಷ ಇನ್ನೂ ಹೆಚ್ಚು ಮಾಡುವುದಕ್ಕೆ ದೊಡ್ಡ ಪ್ರೋಗ್ರಾಮ್ ಹಾಕಿದ್ದೇವೆ ಇವತ್ತು ವಿದ್ಯುತ್ ಬಗ್ಗೆ ಹೇಳಬೇಕೆಂದರೆ, ನಮ್ಮಲ್ಲಿ ವಿದ್ಯುತ್ ಕ್ಷಾಮ ಬಹಳ ಇದೆ. ಇದಕ್ಕೆ ಕಾರಣ ಹಲವಾರು ವರ್ಷಗಳಿಂದ ನಾವು ಬೇಡಿಕೆಗೆ ತಕ್ಕ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡದೇ ಇರುವುದು. ಇವತ್ತು ಡಿಮಾಂಡ್ ಹಾಗೂ ಸಪ್ಲೈನಲ್ಲಿ ಹೊಂದಾಣಿಕೆ ಇಲ್ಲ. ನಮ್ಮ ಕೋಲಾರ ಬೆಂಗಳೂರಿಗೆ ಸಮೀಪದಲ್ಲಿಯೇ ಇದೆ. ನಾವು ಕೊಡದಿದ್ದರೆ ನೀವು ನಮ್ಮನ್ನು ಬಿಡುವುದಿಲ್ಲ. ನಿಮಗೆ ಎಷ್ಟು ಪಾಲು ಕೊಡಬೇಕೋ ಅಷ್ಟು ಪಾಲು ಕೊಟ್ಟಿದ್ದೇವೆ.

ಶ್ರೀ ಎಂ.ವಿ. ವೆಂಕಟಪ್ಪ.—ಕೋಲಾರ ಜಿಲ್ಲೆಯಲ್ಲಿ ಕಾವೇರಿ ನದಿ ಇಲ್ಲ, ತುಂಗಭದ್ರಾ ನದಿ ಇಲ್ಲ. ನಾವು ಪಂಪ್‌ಸೆಟ್ ಹಾಗೂ ಕೆರೆಗಳನ್ನು ಮಾತ್ರ ಅವಲಂಬಿಸಬೇಕಾಗಿದೆ. ಕೆರೆಗಳಲ್ಲಿಂತೂ ಹೂಳು ತೆಗೆಸಿಲ್ಲ, ದುರಸ್ತಿ ಮಾಡುವುದಿಲ್ಲ. ಬೋರ್‌ವೆಲ್ ಹಾಕುವುದಿಲ್ಲ. ಈ ಕಡೆ ಪವರ್ ಇಲ್ಲದಿದ್ದರೆ ಏನಾಗುತ್ತದೆ ?

ಶ್ರೀ ಎಸ್. ಎಂ. ಯಾಹ್ಯಾ.—ನಿಮ್ಮ ಜಿಲ್ಲೆಗೆ ನಾವು ವಿದ್ಯುತ್ ಚೆನ್ನಾಗೇ ಕೊಟ್ಟಿದ್ದೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕೋಲಾರ ಜಿಲ್ಲೆಯ ವಿದ್ಯುತ್ ಪರಿಹಾರಕ್ಕೆ ಜನರೇಟರ್ ಸ್ಥಾಪನೆಗೆ ಒಪ್ಪಿಗೆ ನೀಡಿದ್ದೀರಿ. ಇವತ್ತು ಅಲ್ಲಿಯಷ್ಟೇ ವಿದ್ಯುತ್ ಅಭಾವ ನಮ್ಮ ಮಂಡ್ಯಾ ಜಿಲ್ಲೆಯಲ್ಲೂ ಇದೆ, ಮಂಡ್ಯದಲ್ಲೂ ಜನರೇಟರ್ ಸ್ಥಾಪನೆ ಮಾಡುವ ಉದ್ದೇಶ ನಮ್ಮ ಸರ್ಕಾರಕ್ಕೆ ಇದೆಯೇ ?

ಶ್ರೀ ಎಸ್. ಎಂ. ಯಾಹ್ಯಾ.—ಇದು ಕೋಲಾರಕ್ಕೆ ಸಂಬಂಧಪಟ್ಟ ವಿಚಾರ. ನಿಮ್ಮ ಜಿಲ್ಲೆಯಲ್ಲಿ ನಾವು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದೇವೆ.

೯.೫೦ ಎ.ಎಂ.

ಶ್ರೀ ಎಂ. ವಿ. ವೆಂಕಟಪ್ಪ.—ಕೋಲಾರದಿಂದ ಮುಳಬಾಗಿಲಿಗೆ ೬೫ ಕೆ. ವಿ. ಟವರ್ ಲೈನ್ ಹಾಕಿದ್ದು ಪೋಲ್ಸ್ ಹಾಕಿ ರೆಡಿಯಾಗಿದೆ. ಆ ಲೈನಿಗೆ ವೈರ್ ಇಲ್ಲವೆಂದು ಪೆಂಡಿಂಗ್‌ನಲ್ಲಿದೆ. ನಾಳೆ ಮುಳಬಾಗಿಲಿನಲ್ಲಿ ಹೆಚ್ಚು ಕಡಿಮೆ ಪವರ್ ಸರಿ ಹೋಗುತ್ತದೆ. ಆದ್ದರಿಂದ ಡಿಸೆಂಬರ್ ಕೊನೆಯವರೆಗಾದರೂ ಪೂರ್ತಿ ಮಾಡುವುದಕ್ಕೆ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಸ್ವಲ್ಪ ಹಣದ ಅಭಾವ ಸಹ ಇದೆ. ಆದರೂ ಮಾನ್ಯ ಸದಸ್ಯರು ಹೇಳಿದ ಪ್ರಕಾರ ನಮ್ಮ ಅಧಿಕಾರಿಗಳಿಗೆ ತಿಳಿಸುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್ ಯಡಿಯೂರಪ್ಪನವರು ಗೈರು ಹಾಜರಾಗಿದ್ದಾರೆ.)

## ವಿಜಯನಗರ ಉಕ್ಕು ಕಾರ್ಖಾನೆ ಬಗ್ಗೆ

೪೬೬. ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಕೈಗಾರಿಕಾ ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ವಿಜಯನಗರ ಉಕ್ಕು ಕಾರ್ಖಾನೆ ಸ್ಥಾಪನೆಗಾಗಿ ಸರ್ಕಾರವು ಪ್ರಯತ್ನಪಡುತ್ತಿದೆಯೇ ?

ಆ) ಹಾಗಿದ್ದಲ್ಲಿ ಈ ಕಾರ್ಖಾನೆ ಸ್ಥಾಪನೆಗೆ ಸರ್ಕಾರವು ನಡೆಸಿರುವ ಪ್ರಯತ್ನಗಳೇನು ?

ಇ) ವಿಜಯನಗರ ಉಕ್ಕು ಕಾರ್ಖಾನೆಗೆ ಶಂಕು ಸ್ಥಾಪನೆಯಾಗಿ ಎಷ್ಟು ವರ್ಷಗಳಾಗಿವೆ,

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ ಇಂಧನ ಮತ್ತು ವಕ್ಫ್ ಮಂತ್ರಿಗಳು).—

ಅ) ಪ್ರಯತ್ನ ಪಡುತ್ತಿದೆ.

ಇ) ವಿಜಯನಗರ ಉಕ್ಕು ಕಾರ್ಖಾನೆಯ ಸಲುವಾಗಿ ೮,೭೬೬ ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡು ೧೦ ಕೋಟಿ ರೂಪಾಯಿಗಳ ಪರಿಹಾರ ಕೊಡಲು ನಿರ್ಧರಿಸಿ ಈಗಾಗಲೇ ೫ ಕೋಟಿ ರೂಪಾಯಿಗಳನ್ನು ವಿತರಣೆ ಮಾಡಲಾಗಿದೆ.